ಅತಿಕ್ರಮಣವಾಗಿ ಕಟ್ಟಡ ಕಟ್ಟಡದೇ ಇರತಕ್ಕಂಥವರು, ಈ ಮೂಲಕವಾಗಿ ಮತ್ತೆ ಅನುಕೂಲಗಳನ್ನು ಪಡೆಯಬೇಕೆಂದು ಈ ತರಹದಲ್ಲಿ ಅರ್ಜಿ ಕೊಡಲಿಕ್ಕೆ ಪ್ರಯತ್ನ ಮಾಡತಕ್ಕಂಥ ಸಮಾಜಬಾಹಿರ ಶಕ್ತಿಗಳು ಕೂಡ ಇವೆ. ನ್ಯಾಯಯುತವಾಗಿ ಅರ್ಜಿ ಕೊಡತಕ್ಕಂಥ ವ್ಯಕ್ತಿಗಳ ಬಗ್ಗೆ ಸರ್ಕಾರಕ್ಕೆ ಸಹಾನುಭೂತಿ ಇದೆ. ಆದರೆ, ಅವರ ಹೆಸರಿನಲ್ಲಿ ಈ ಭೂಮಿಯನ್ನು ಕಬಳಿಸಬೇಕೆನ್ನುವಂಥ ದೃಷ್ಟಿಯಿಂದ ಬಹಳ ಜನಗಳು ಸೇರಿರತಕ್ಕಂಥಾದ್ದು ಕೂಡ ಸರ್ಕಾರದ ಗಮನಕ್ಕೆ ಬಂದಿರತಕ್ಕ ಹಿನ್ನೆಲೆಯಲ್ಲಿ, ತಾವೇನು ಸೂಚನೆಯನ್ನು ಕೊಟ್ಟಿದ್ದೀರಿ, ಅದನ್ನು ಸರ್ಕಾರ ಪರಿಶೀಲಿಸುತ್ತದೆ. ಆದರೆ, ಸಧ್ಯಕ್ಕೆ ಮಾತ್ರ ಅವಕಾಶಗಳು ಇಲ್ಲ. ಈಗಿರುವಂಥ ಎಪ್ಪತ್ತೆಂಟು ಸಾವಿರಕ್ಕಿಂತ ಹೆಚ್ಚು ಅರ್ಜಿಗಳನ್ನು ವಿಲೇವಾರಿ 2005ರ ಒಂಭತ್ತನೇ ತಿಂಗಳೊಳಗಾಗಿ ಮಾಡುತ್ತೇವೆ. ತಮ್ಮ ಸಲಹೆಯನ್ನು ನಾವು ಸಹಾನುಭೂತಿಯಿಂದ ಪರಿಶೀಲಿಸುತ್ತೇವೆ.

ಕಳೆದ ಮೂರು ವರ್ಷಗಳಲ್ಲಿ ಬಗರ್‌ಹುಕಂ ಸಾಗುವಳಿದಾರರಿಗೆ ಭೂಮಿ ಮಂಜೂರು.

64(347) ಶ್ರೀ ಶ್ರೀರಾಮರೆಡ್ಡಿ(ಬಾಗೇಪಲ್ಲಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕಳೆದ ಮೂರು ವರ್ಷಗಳಲ್ಲಿ ಎಷ್ಟು ಜನ ಬಗರ್ ಹುಕುಂ ಸಾಗುವಳಿದಾರರಿಗೆ ಭೂಮಿ ಮಂಜೂರು ಮಾಡಲಾಗಿದೆ ಮತ್ತು ಅದರ ವಿಸ್ತೀರ್ಣ ಎಷ್ಟು (ತಾಲ್ಲೂಕುವಾರು ವಿವರ ನೀಡುವುದು);

ಆ) ವಿಲೇವಾರಿಯಾಗದೆ ಉಳಿದಿರುವ ಬಗರ್ ಹುಕುಂ ದರಖಾಸ್ತು ಜಮೀನುಗಳನ್ನು ವಿಲೇವಾರಿ ಮಂಜೂರು ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ;

ಇ) ಬಗರ್ ಹುಕುಂ ಸಾಗುವಳಿದಾರರು ಈ ಹಿಂದೆ ಅರ್ಜಿ ಸಲ್ಲಿಸದೇ ಇದ್ದರೆ ಅಂತಹವರಿಗೆ ಈಗ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗುವುದು ;

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು)

ಅ) ಅನುಬಂಧ (1)ರಲ್ಲಿರುವಂತೆ ವಿವರ ನೀಡಲಾಗಿದೆ.

ಆ) ಸರ್ಕಾರಿ ಅಧಿಸೂಚನೆ ಸಂ. ಸಂವ್ಯಶಾಇ 87 ಶಾಸನ 2003 ದಿನಾಂಕ 19.03.2004 ರನ್ವಯ ಕರ್ನಾಟಕ ಭೂ ಕಂದಾಯ ಕಾಯಿದೆ 1964ರ ಕಲಂ 94(ಬಿ)ಗೆ ತಿದ್ದುಪಡಿ ತರಲಾಗಿದ್ದು ವಿಲೇವಾರಿಯಾಗದೇ ಉಳಿದಿರುವ ಬಗರ್ ಹುಕುಂ ದರಖಾಸ್ತು ಜಮೀನುಗಳನ್ನು ವಿಲೇವಾರಿಗಾಗಿ ಕಾಲವಕಾಶ ವಿಸ್ತರಿಸಲಾಗಿದೆ. ಅದರಂತೆ ಈ ಬಾಕಿ ಅರ್ಜಿಗಳನ್ನು ದಿನಾಂಕ 27.04.2005ರೊಳಗೆ ವಿಲೇವಾರಿ ಮಾಡಲು ಕಾಲಾವಕಾಶ ಕಲ್ಪಿಸಲಾಗಿದೆ.

ಇ) ಸಧ್ಯಕ್ಕೆ ಪ್ರಸ್ತಾಪ ಇಲ್ಲ.

ಅನುಬಂಧ – 1

ಜಿಲ್ಲೆ	ತಾಲ್ಲೂಕು	ಸ್ವೀಕೃತಿ ಅರ್ಜಿ ಸಂಖ್ಯೆ	ಮಂಜೂರಾದ ಜಮೀನಿನ ವಿಸ್ತೀರ್ಣ
1. ಚಿಕ್ಕಮಗಳೂರು	1. ತರೀಕೆರೆ	56	136.17
	2. ಕಡೂರು	26	46.11
	3. ನರಸಿಂಹರಾಜಪುರ	183	589.32
		265	775.20
	1. ಬಳ್ಳಾರಿ	57	136.10
	2. ಶಿರಗುಪ್ಪ	97	275.78
	3. ಸಂಡೂರು	2311	7082.65
	4. ಹೊಸಕೋಟೆ	339	596.35
2. ಬಳ್ಳಾರಿ	5. ಕೂಡ್ಲಿಗಿ	667	1856.19
	6. ಹೆಚ್.ಬಿ. ಹಳ್ಳಿ	596	1667.03
	7. ಹಾನಗಲ್ಲು	608	2065.87
		4675	13650.47
	1. ಹಾವೇರಿ	721	1574.18
	2. ರಾಣೇಬೆನ್ನೂರು	338	940.31
	3. ಬ್ಯಾಡಗಿ	422	876.03
	4. ಹಿರೇಕೆರೂರು	313	373.33
3. ಹಾವೇರಿ	5. ಸವಣೂರು	210	574.30
	6. ಶಿಗ್ಗಾಂವ	932	2041.05
	7. ಹಾನಗಲ್ಲು	210	388.05
		3196	6766.00
	1. ಹೊಳೆನರಸೀಪುರ	1334	1774.22
	2. ಸಕಲೇಶಪುರ	2528	2933.13
	3. ಅರಸೀಕೆರೆ	3654	5629.39

1	2	3	4	5	6
		4.	ಅರಕಲಗೂಡು	414	345.18
4.	ಹಾಸನ	5.	ಆಲೂರು	595	974.07
		6.	ಬೇಲೂರು	4685	6565.05
		7.	ಚನ್ನರಾಯಪಟ್ಟಣ	2175	3265.23
		8.	ಹಾಸನ	2961	3277.39
				18340	24766.06
		1.	ಚಿತ್ರದುರ್ಗ	791	1189.06
		2.	ಚಳ್ಳಕೆರೆ	2578	5711.22
		3.	ಮೊಳಕಾಲ್ಮುರು	465	1080.20
5.	ಚಿತ್ರದುರ್ಗ	4.	ಹೊಳಲ್ಕೆರೆ	1677	2682.15
		5.	ಹಿರಿಯೂರು	895	1704.08
		6.	ಹೊಸದುರ್ಗ	1931	2879.17
				8341	15347.08
		1.	ಬಾಗಲಕೋಟೆ	4	14.15
		2.	ಬಾದಾಮಿ	107	238.33
		3.	ಹಾನಗುಂದ	26	16.20
6.	ಬಾಗಲಕೋಟೆ	4.	ಜಮಖಂಡಿ	79	150.34
		5.	ಮುದೋಳ್	28	69.07
				234	502.29
		1.	ಧಾರವಾಡ	197	483.38
		2.	ಹುಬ್ಬಳ್ಳಿ	29	48.01
7.	ಧಾರವಾಡ	3.	ಕುಂದಗೋಳ	6	5.07
				231	537.06
		1.	ಚಾಮರಾಜನಗರ	2110	4407.31
		2.	ಕೊಳ್ಳೆಗಾಲ	2481	4209.26
8.	ಚಾಮರಾಜ	3.	ಗುಂಡ್ಲುಪೇಟೆ	3649	6439.16
	ನಗರ	4.	ಯಳಂದೂರು	66	63.24
				8306	15118.97
		1.	ರಾಮನಗರ	1260	1489.25
		2.	ಚನ್ನಪಟ್ಟಣ	196	208.66
		3.	ಮಾಗಡಿ	1516	1559.16
		4.	ಕನಕಪುರ	2929	4887.37

1	2	3	4	5	6
9.	ಬೆಂಗಳೂರು ಗ್ರಾಮಾಂತರ	5.	ನೆಲಮಂಗಲ	676	867.11
		6.	ದೊಡ್ಡಬಳ್ಳಾಪುರ	2308	3258.19
		7.	ದೇವನಹಳ್ಳಿ	1919	1734.24½
		8.	ಹೊಸಕೋಟೆ	978	2804.00
				11782	16820.01½
10.	**ಗದಗ ಕಳೆದ ಮೂರು ವರ್ಷದಲ್ಲಿ ಬಗರ್ ಹುಕುಂ ಸಾಗುವಳಿದಾರರಿಗೆ ಭೂಮಿ ಮಂಜೂರು ಮಾಡಿರುವುದಿಲ್ಲ.**				
		1.	ಶಿವಮೊಗ್ಗ	501	628.00
		2.	ಭದ್ರಾವತಿ	812	964.00
		3.	ತೀರ್ಥಹಳ್ಳಿ	1248	1045.00
		4.	ಸಾಗರ	3819	10866.00
11.	ಶಿವಮೊಗ್ಗ	5.	ಸೊರಬ	749	1236.00
		6.	ಶಿಕಾರಿಪುರ	728	1264.00
		7.	ಹೊಸನಗರ	911	1639.00
				8768	17642.00
		1.	ಮಂಡ್ಯ	741	1125.01
12.	ಮಂಡ್ಯ	2.	ಮದ್ದೂರು	371	262.22
		3.	ಮಳವಳ್ಳಿ	92	118.16
		4.	ಶ್ರೀರಂಗಪಟ್ಟಣ	213	215.52
		5.	ಪಾಂಡವಪುರ	90	157.15
		6.	ಕೆ.ಆರ್, ಪೇಟೆ	2878	4585.19
		7.	ನಾಗಮಂಗಲ	1129	1768.30
				5517	8231.15
13.	ಕೊಪ್ಪಳ	1.	ಕೊಪ್ಪಳ	963	2655.00
		2.	ಗಂಗಾವತಿ	865	1420.00
		3.	ಯಲಬುರ್ಗಾ	20	60.00
		4.	ಕುಷ್ಟಗಿ	157	530.00
				2025	4665.00
14.	ಕಾರವಾರ	1.	ಕೊಪ್ಪಳ	963	2655.00
		2.	ಗಂಗಾವತಿ	885	1420.00
		3.	ಯಲಬುರ್ಗಾ	20	60.00
		4.	ಕುಷ್ಟಗಿ	157	530.00
				2025	4665.00
		1.	ಕಾರವಾರ	18	5.34
		2.	ಹಳಿಯಾಳ	38	93.37

1	2	3	4	5	6
		3.	ಜೊಯಡಾ	43	65.26
		4.	ಆಂಕೋಲಾ	–	–
		5.	ಕುಮಟಾ	34	43.31
15.	ಕಾರವಾರ	6.	ಹೊನ್ನಾವರ	75	100.25
		7.	ಭಟ್ಕಳ	23	28.93
		8.	ಶಿರಸಿ	66	94.00
		9.	ಸಿದ್ದಾಪುರ	38	30.37
		10.	ಮುಂಡಗೋಡ	144	372.30
				469	844.32
		1.	ಬೀದರ	59	183.04
		2.	ಔರಾದ	54	189.00
16.	ಬೀದರ	3.	ಬಸವಕಲ್ಯಾಣ	201	450.20
		4.	ಭಾಲ್ಕಿ	21	55.06
		5.	ಹುಮನಾಬಾದ	155	575.39
				490	1483.39
		1.	ಮೈಸೂರು	542	631.26
		2.	ಟಿ. ನರಸೀಪುರ	478	444.19
		3.	ನಂಜನಗೂಡು	256	329.11
		4.	ಹುಣಸೂರು	8	11.21
17.	ಮೈಸೂರು	5.	ಕೆ.ಆರ್. ನಗರ	207	184.32
		6.	ಪಿರಿಯಾಪಟ್ಟಣ	1583	2110.30
		7.	ಹೆಚ್.ಡಿ. ಕೋಟೆ	590	1276.31
				3664	4989.13
		1.	ರಾಯಚೂರು	284	887.12
		2.	ಮಾನವಿ	295	701.06
		3.	ದೇವದುರ್ಗ	135	353.27
18.	ರಾಯಚೂರು	4.	ಲಿಂಗಸೂಗೂರು	10	27.32
		5.	ಸಿಂಧನೂರು	30	52.20
				854	2022.17
		1.	ದಾವಣಗೆರೆ	215	212.15
		2.	ಹರಿಹರ	200	358.22
		3.	ಚನ್ನಗಿರಿ	142	157.07
19.	ದಾವಣಗೆರೆ	4.	ಹೊನ್ನಾಳಿ	782	1339.23
		5.	ಜಗಳೂರು	118	225.11
				1467	2292.38

1	2	3	4	5	6
20.ಬೆಂಗಳೂರು		1.	ಬೆಂಗಳೂರು(ಉ)	54	36.37
ನಗರ		2.	ಬೆಂಗಳೂರು(ಅ)	221	272.08
		3.	ಬೆಂಗಳೂರು(ದ)	366	427.26
		4.	ಬೆಂಗಳೂರು(ಪೂ)	–	–
		5.	ಆನೇಕಲ್	323	289.37
				964	1026.28
		1.	ಮಂಗಳೂರು	1788	1682.81
		2.	ಬಂಟ್ವಾಳ	8386	8860.93
		3.	ಪುತ್ತೂರು	6464	8736.18
21.ದಕ್ಷಿಣ	ಕನ್ನಡ	4.	ಬೆಳ್ತಂಗಡಿ	4362	5785.92
		5.	ಸುಳ್ಯ	3500	4805.70
				24500	29871.54
		1.	ಉಡುಪಿ	4223	3758.08
		2.	ಕುಂದಾಪುರ	10140	13882.05
22.ಉಡುಪಿ		3.	ಕಾರ್ಕಳ	6819	4873.38
				21182	22513.51
		1.	ತುಮಕೂರು	552	374.37
		2.	ಗುಬ್ಬಿ	1256	$2363.09\frac{1}{2}$
		3.	ಕುಣಿಗಲ್	4347	5506.05
		4.	ತಿಪಟೂರು	2989	$3419.14\frac{1}{2}$
		5.	ತುರುವೇಕೆರೆ	8375	10024.37
23.ತುಮಕೂರು		6.	ಚಿ.ನಾ.ಹಳ್ಳಿ	2156	3100.03
		7.	ಮಧುಗಿರಿ	934	1572.14
		8.	ಕೊರಟಗೆರೆ	430	760.19
		9.	ಶಿರಾ	3871	7700.00
		10.	ಪಾವಗಡ	345	517.00
				25255	35343.22
		1.	ಮಡಿಕೆರೆ	128	4.73
24.ಕೊಡಗು		2.	ವಿರಾಜಪೇಟೆ	313	6.50
		3.	ಸೋಮವಾರ ಪೇಟೆ	475	28.50
				916	39.73
		1.	ವಿಜಾಪುರ	125	435.09
		2.	ಮುದ್ದೇಬಿಹಾಳ	16	45.08

1	2	3	4	5	6
25.	ವಿಜಾಪುರ	3.	ಬಿ. ಬಾಗೇವಾಡಿ	16	66.12
		4.	ಇಂಡಿ	17	70.03
		5.	ಸಿಂದಗಿ	208	498.01
				382	1114.33
		1.	ಬೆಳಗಾವಿ	7	19.00
		2.	ಖಾನಾಪುರ	54	159.18
		3.	ಉಕ್ಕೇರಿ	174	291.08
		4.	ಬೈಲಹೊಂಗಲ	–	–
		5.	ಸವದತ್ತಿ	59	113.32
26.	ಬೆಳಗಾಂ	6.	ಗೋಕಾಕ್	13	25.00
		7.	ರಾಮದುರ್ಗ	6	23.20
		8.	ರಾಯಭಾಗ	6	23.10
		9.	ಅಥಣಿ	107	254.00
				426	909.08

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ಇದರಲ್ಲಿ ಬಹಳ ಮುಖ್ಯವಾಗಿರತಕ್ಕಂಥ ಅಂಶ, ಹಿಂದೆ ಒಂದು ತೀರ್ಮಾನ ಆಗಿತ್ತು. ಬಗರ್ ಹುಕುಂ ಸಾಗುವಳಿ ವಿಚಾರದಲ್ಲಿ ಅವಧಿ ನಿಗದಿ ಮಾಡಿದ್ದರು. ಅದು ಮುಗಿದು ಹೋಯಿತು. ಆದರೆ, ಇನ್ನೂ ಸಾವಿರಾರು ಜನ ಅರ್ಜಿ ಹಾಕದೆ ಇರುವವರು ಇದ್ದಾರೆ. ಅದನ್ನು ಹೆಚ್ಚು ಮಾಡಬೇಕೆಂದು ಸುಮಾರು ಸಲ ಸರ್ಕಾರವನ್ನು ಒತ್ತಾಯ ಮಾಡಿದ್ದೇವೆ. ಅದರ ಬಗ್ಗೆ ಯಾವ ತೀರ್ಮಾನವನ್ನು ಸರ್ಕಾರ ತೆಗೆದುಕೊಂಡಿಲ್ಲ. ಅಂದರೆ, ಅವಧಿ ವಿಸ್ತರಣೆ ಮಾಡುತ್ತಾರೆಯೇ ಇಲ್ಲವೇ ? ಅವಧಿ ವಿಸ್ತರಣೆಯನ್ನು ಮಾಡಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇವೆ. ಏಕೆಂದರೆ, ಸಾವಿರಾರು ಜನ ಅದರಲ್ಲಿ ಬಿಟ್ಟು ಹೋಗಿದ್ದಾರೆ. ಅದರ ಜೊತೆಗೆ ಇನ್ನೊಂದು ಬಹಳ ಮುಖ್ಯವಾಗಿರತಕ್ಕಂಥ ವಿಚಾರ. ಆ ವಿಲೇವಾರಿಯಲ್ಲಿ ಅಧಿಕಾರಿಗಳು ವಿಪರೀತವಾದಂಥ ನಿಧಾನಗತಿ ತೋರಿಸುತ್ತಿದ್ದಾರೆ. ವಿಪರೀತವಾದಂಥ ಡಿಲೇ ಆಗುತ್ತಾ ಇದೆ. ಮಂಜೂರು ಆಗಿರತಕ್ಕಂಥಾದು ಬಗರ್ ಹುಕುಂ ಸಾಗುವಳಿ ಸಮಿತಿಗಳು. ಮಂಜೂರು ಮಾಡಿರತಕ್ಕಂಥ ಭೂಮಿಯನ್ನು ಕೂಡ, ಇದುವರೆಗೂ ವಿತರಣೆ ಮಾಡದೇ, ಫೈಲುಗಳನ್ನು ಹಾಗೇಯೇ ಇಟ್ಟುಕೊಂಡಿದ್ದಾರೆ. ಅಂದರೆ, ಅವುಗಳಿಗೆ ಸಾಗುವಳಿ ಚೀಟಿಯನ್ನು ಕೊಡದೆ ಇಟ್ಟುಕೊಂಡಿದ್ದಾರೆ. ಇದೊಂದು ಕಡೆ. ಆ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಮತ್ತೆ ಸಾಗುವಳಿ ಚೀಟಿ ಕೊಟ್ಟಿರತಕ್ಕಂಥವರಿಗೆ ದುರಸ್ತಿ ಮತ್ತು ಪೋಡ್ ಮಾಡಬೇಕಾದರೆ ಅತ್ಯಂತ ನಿಧಾನವಾಗಿದೆ. ಸುಮಾರು 10–15 ವರ್ಷಗಳ ಹಿಂದೆ ಮಂಜೂರು ಮಾಡಿರತಕ್ಕ ಅರ್ಜಿಗಳಿಗೆ ಕೊಟ್ಟಿರತಕ್ಕ ಸಾಗುವಳಿ ಚೀಟಿಗಳಿಗೆ ದುರಸ್ತಿ ಮತ್ತು ಪೋಡ್ ಮಾಡಿಲ್ಲ.

ದುರಸ್ತು ಮತ್ತು ಪೋಡ್ ಮಾಡದೇ ಇರುವ ಕಾರಣಕ್ಕೋಸ್ಕರ ಏನಾಗಿದೆಯೆಂದರೆ, ಹಳ್ಳಿಗಳಲ್ಲಿ ಸುಮಾರು ಜಗಳಗಳು ಪ್ರಾರಂಭವಾಗಿದೆ. ಏಕೆಂದರೆ, ಒಂದು ಸರ್ವೇ ನಂಬರಿನಲ್ಲಿ ನೂರಾರು ಎಕರೆ ಭೂಮಿ ಇರುತ್ತೆ. ಸುಮಾರು ಜನಕ್ಕೆ ಮಂಜೂರು ಮಾಡಿರುತ್ತಾರೆ. ಯಾರದು, ಯಾವ ಪೊಸಿಷನ್ ಎಂದು ಕ್ಲಿಯರ್ ಆಗಿರುವುದಿಲ್ಲ. ದುರಸ್ತಿ-ಪೋಡ್ ಆಗದೇ ಕ್ಲಿಯರ್ ಆಗುವುದಿಲ್ಲ, ಪೊಸಿಷನ್‌ನಲ್ಲಿ ಯಾರಿದ್ದಾರೆ ಎಂದು, ಇದರಿಂದಾಗಿ, ಹೊಡೆದಾಟಗಳಾಗಿ ವಿಪರೀತ ಕ್ರಿಮಿನಲ್ ಕೇಸುಗಳು ಬರುತ್ತಾ ಇವೆ. ಮೂರು ಸಮಸ್ಯೆಗಳು, ಒಂದು ದುರಸ್ತಿ ಪೋಡ್ ಮಾಡತಕ್ಕಂಥಾದ್ದು, ಇನ್ನೊಂದು ಅವರಿಗೆ ಸಾಗುವಳಿ ಚೀಟಿ ಕೊಡತಕ್ಕಂಥಾದ್ದು, ಮತ್ತು ಅವಧಿ ವಿಸ್ತರಣೆ ಮಾಡತಕ್ಕಂಥಾದ್ದು ಈ ಮೂರು ಪ್ರಶ್ನೆಗಳಿಗೆ ಸರ್ಕಾರ ಉತ್ತರ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಹಿಂದಿನ ಪ್ರಶ್ನೆಗೆ ಮಾನ್ಯ ಶಾಸಕರಿಗೆ ಕೊಟ್ಟಂಥ ಉತ್ತರ ಇದೊಂದು ವಿಭಿನ್ನವಾದುದಾಗಿದ್ದರೂ ಕೂಡ 30-4-1999ರವರೆಗೆ ಅರ್ಜಿ ನಮೂನೆ 53 ರಲ್ಲಿ ಅರ್ಜಿಯನ್ನು ಕೊಡಲಿಕ್ಕೆ ಕಾಲಾವಧಿಯನ್ನು ಕೊಡಲಾಗಿತ್ತು. ಭೂ ಕಂದಾಯ ಅಧಿನಿಯಮ 64 ಕ್ಕೆ ತಂದಂಥ ತಿದ್ದುಪಡಿಗೆ ಅನುಗುಣವಾಗಿ 10 ಲಕ್ಷದ 89 ಸಾವಿರ ಅರ್ಜಿಗಳು ನಮಗೆ ಬಂದವು. ಇವೆಲ್ಲಾ ನಾವೂ ಅನಧಿಕೃತವಾಗಿ ಸಾಗು ಮಾಡುತ್ತಿದ್ದೇವೆ. ಸಾಗುವಳಿ ಚೀಟಿ ಇದೆ, ಬೇರೆ ಬೇರೆ ಕಾರಣಗಳಿಂದ ನಮ್ಮ ಸ್ವಾಧೀನದಲ್ಲಿದೆ, ಈ ಕಾರಣಕ್ಕಾಗಿ ಇದನ್ನು ಸಕ್ರಮಣಗೊಳಿಸಬೇಕೆನ್ನುವಂಥ ಅರ್ಜಿಗಳು ಬಂದಿದ್ದವು. ಆದಾದ ನಂತರ ಅನೇಕರು, ತಿಳುವಳಿಕೆ ಇಲ್ಲದೇ ಇರತಕ್ಕಂಥ ರೈತರು ಇದ್ದುದ್ದರಿಂದ, ಗಡುವನ್ನು ವಿಸ್ತರಿಸಬೇಕೆಂಬ ಮನವಿ ಬಂತು. ಆ ಕಾರಣಕ್ಕಾಗಿಯೇ ನಿಯಮಾವಳಿಗಳಿಗೆ ಮತ್ತೆ ತಿದ್ದುಪಡಿಯನ್ನು ತಂದು 30-4-1999 ರವರೆಗೆ ಕಾಲಾವಕಾಶವನ್ನು ಕೊಡಲಾಯಿತು. ಆ ಕಾಲಾವಕಾಶ ಕೊಟ್ಟನಂತರ ವಿಲೇವಾರಿ ಆಗಬೇಕಾಗಿದ್ದಕ್ಕೆ ವಿಳಂಬವಾಗಿದೆ ಎಂಬ ಮಾತನ್ನು ಹೇಳುತ್ತಾರೆ. ಈಗ 10 ಲಕ್ಷದ 89 ಸಾವಿರ ಅರ್ಜಿಗಳನ್ನು ಅಕ್ರಮ ಸಕ್ರಮಗೊಳಿಸಬೇಕಾಗಿರತಕ್ಕ ಸಮಿತಿಗಳು, ಆ ನಿಯಮಕ್ಕೆ ಮತ್ತು ಆ ಸಂದರ್ಭಕ್ಕನುಗುಣವಾದಂಥ ರೀತಿಯಲ್ಲಿ ಕೊಡುತ್ತಾ ಇಲ್ಲ ಆ ಕಾರಣದಿಂದಲೂ ಕೂಡ ಸ್ವಲ್ಪಮಟ್ಟಿಗೆ ವಿಳಂಬವಾಗಿದೆ. ಆದಾದ ನಂತರ 27-4-2005 ರವರೆಗೆ ಈ ಅಧಿಸೂಚನೆಯನ್ನು ಹೊರಡಿಸಿ, ವಿಲೇವಾರಿ ಮಾಡತಕ್ಕಂಥಾದ್ದು ಕೇವಲ ಮೂರು ವರ್ಷದೊಳಗಾಗಿ ಮಾಡಬೇಕೆಂಬ ಸೂಚನೆ ಇತ್ತು. ಅದನ್ನು 27-4-2005ರವರೆಗೆ ಮುಂದುವರಿಸಿದ್ದೇವೆ. ಹೊಸ ಸರ್ಕಾರ ಬಂದಿದೆ. ಹೊಸ ಶಾಸಕರುಗಳು ಆಯ್ಕೆಯಾಗಿ ಬಂದಿದ್ದಾರೆ. ಅವರು ಹಳೇ ಸಮಿತಿಯ ಮೂಲಕ ವಿಲೇವಾರಿ ಮಾಡಿಸಬೇಡಿ ಎಂಬ ಮನವಿಯನ್ನು ನಮಗೆ ಕೊಟ್ಟಿರತಕ್ಕಂತ ಸಂದರ್ಭದಲ್ಲಿ, ಸರ್ಕಾರ ಅದರ ಮೇಲೆ ಗಮನ ಇಟ್ಟಿದೆ. ಈ ಅಧಿವೇಶನ ಮುಗಿದ ತಕ್ಷಣವೇ, ಬಗರ್ ಹುಕುಂನ ಅಕ್ರಮ ಮತ್ತು ಸಕ್ರಮ ಸಮಿತಿಗಳನ್ನು ರಚನೆ ಮಾಡುತ್ತೇವೆ. ಆ ಸಮಿತಿಗಳನ್ನು ರಚನೆ ಮಾಡಿದ ನಂತರ ಆ ವಿಲೇವಾರಿಯನ್ನು ನಾವು

ತುರ್ತುಗತಿಯಲ್ಲಿ ಮಾಡಿ ಮುಗಿಸಬೇಕೆಂದು ಮಾಡಿದ್ದೇವೆ. ಯಾವುದೇ ಸಂದರ್ಭದಲ್ಲಿ 27-4-2005 ರೊಳಗಾಗಿಯೇ ಈ ಎಲ್ಲಾ ಅರ್ಜಿಗಳನ್ನು ಇತ್ಯರ್ಥಗೊಳಿಸಬೇಕೆಂಬುದೇ ಆಗಿದೆ. ಹಿಂದಿನ ಪ್ರಶ್ನೆಗೆ ನಾನು ಉತ್ತರ ಕೊಟ್ಟಂತೆ, ಪದೇ ಪದೇ ಅವಧಿಯನ್ನು ವಿಸ್ತರಿಸಿದರೆ, ಬೇರೆ ಬೇರೆ ಜನಗಳೂ ಕೂಡ ಈ ಅರ್ಜಿ ನಮೂನೆ 53 ರ ಅರ್ಜಿಯ ಅಡಿಯಲ್ಲಿ ಮತ್ತೆ ಅಕ್ರಮವಾಗಿ ಭೂಮಿಯನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳುವಂಥ ಕಾನೂನುಬಾಹಿರ ಚಟುವಟಿಕೆಗಳಿಗೆ ಪ್ರೋತ್ಸಾಹ ಕೊಟ್ಟಂತೆ ಆಗುತ್ತದೆ ಎನ್ನುವ ಕಾರಣಕ್ಕೆ ಈ ಸರ್ಕಾರ ಸಧ್ಯದ ಮಟ್ಟಿಗೆ, ಅರ್ಜಿಯನ್ನು ಕೊಡಲಿಕ್ಕೆ ಕಾಲಾವಧಿಯನ್ನು ವಿಸ್ತರಣೆ ಮಾಡುವುದಿಲ್ಲ. ಆದರೆ, ತಾವು ಹೇಳಿದಂತೆ ವಿಲೇವಾರಿ ಮಾಡುವುದಕ್ಕೆ ಸಂಪೂರ್ಣವಾದ ಒತ್ತನ್ನು ಮತ್ತು ಗಮನವನ್ನು ಕೊಟ್ಟು, ಅವುಗಳನ್ನು ವಿಲೇವಾರಿ ಮಾಡಿಸುತ್ತೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಈ ಸೇಂದಿ ವನಗಳನ್ನು ರೆಗ್ಯುಲರೈಸ್ ಮಾಡಲಿಕ್ಕೆ ನೀವು ತೀರ್ಮಾನ ತೆಗೆದುಕೊಂಡಿರಿ. ಅದಾದ ಮೇಲೆ ಅರ್ಜಿಹಾಕಲಿಕ್ಕೆ ಅವಕಾಶ ಕೂಡಲೇ ಇಲ್ಲ. ಆಗ ನಾವೆಲ್ಲಾ ಕೆಲಸ ಮಾಡಬೇಕಾದರೆ, ಸೇಂದಿವನ ಮಂಜೂರು ಮಾಡುವುದಿಲ್ಲವೆಂದು ರಿಜೆಕ್ಟ್ ಮಾಡಿದವರೂ ಕೂಡ, ಮತ್ತೆ ಅರ್ಜಿಹಾಕಲಿಕ್ಕೆ ಕಾಯ್ದುಕೊಂಡಿದ್ದಾರೆ. ದಯಮಾಡಿ, ಮಾನವೀಯತೆ ಆಧಾರದ ಮೇಲೆ ಇನ್ನೊಂದು ಆರು ತಿಂಗಳಾದರೂ ಅವಕಾಶ ಕೊಟ್ಟು, ಅರ್ಜಿ ಹಾಕಿಕೊಳ್ಳುವುದಕ್ಕೆ ಅನುಕೂಲವಾಗುವಂತೆ, ಅದನ್ನೂ ಸೇರಿಸಿ ಮುಂದಿನ ವರ್ಷ ಏಳನೇ ತಾರೀಖಿನೊಳಗೆ ಕಂಪ್ಲೀಟ್ ಮಾಡುವ ಹಾಗೆ ತಾವು ಏಕೆ ಮಾಡಬಾರದು?

ಶ್ರೀ ಆರ್. ಅಶೋಕ್ : ಸರ್ಕಾರಿ ಜಮೀನನ್ನು ಫಾರೆಸ್ಟ್ ಡಿಪಾರ್ಟ್‌ಮೆಂಟ್‌ಗೆ ನಮ್ಮ ರೆವಿನ್ಯೂ ಇಲಾಖೆಯವರು ವರ್ಗಾವಣೆ ಮಾಡಿದರು. ಸರ್ಕಾರಿ ಗೋಮಾವಳಗಳನ್ನು ಫಾರೆಸ್ಟ್ ಡಿಪಾರ್ಟ್‌ಮೆಂಟ್ ಎಂದು ಪಹಣಿಗಳಲ್ಲಿ ಬಂದಿದೆ. ಆದರೆ ಮತ್ತೆ ಸರ್ಕಾರ ಈಗ ಅದನ್ನು ಇಲ್ಲ ಆ ತರಹ ಯಾವುದೇ ಜಮೀನನ್ನು ಹ್ಯಾಂಡ್ ಓವರ್ ಮಾಡಿದ್ದರೂ ಸರ್ಕಾರ ಗೋಮಳ ಅಂತ ಕನ್ವೀಡರ್ ಮಾಡಿ ಅವರಿಗೆ ಹಕ್ಕು ಪತ್ರ ಕೊಡಬೇಕೆಂದು ಸರ್ಕಾರದ ಆದೇಶ ಬಂದಿದೆ, ಮತ್ತು ಅಲ್ಲಿ ಉಳುಮೆ ಮಾಡುತ್ತಿದ್ದವರಿಗೆ ಹೊಸದಾಗಿ ಅರ್ಜಿ ಹಾಕಿಕೊಳ್ಳುವುದಕ್ಕೆ ನಾವು ಅವಕಾಶ ಕೊಡದೇ ಇದ್ದರೆ ಅವರಿಗೆ ನ್ಯಾಯ ನಾವು ಹೇಗೆ ದೊರಕಿಸಿಕೊಡುವುದಕ್ಕೆ ಆಗುತ್ತದೆ ?

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ನನಗೆ ಗೊತ್ತಿರುವ ಪ್ರಕಾರ ಗೋಮಾಳಗಳನ್ನು ಅರಣ್ಯ ಇಲಾಖೆಗೆ ಹಸ್ತಾಂತರ ಮಾಡಿರತ್ಕಕಂಥ ಉದಾಹರಣೆಗಳು ನಮ್ಮ ಮುಂದೆ ಇಲ್ಲ. ಅಕಸ್ಮಾತ್ ಯಾವುದಾದರೂ ಆ ರೀತಿಯಾಗಿ ಅರಣ್ಯ ಇಲಾಖೆಗೆ ಕೊಟ್ಟಿದ್ದರೆ ಅದು ಕ್ಲಾಸಿಫೈಡ್ 'ಸಿ' ಮತ್ತು 'ಡಿ' ಕ್ಲಾಸಿಫಿಕೇಷನ್ ಕೆಳಗೆ ವರ್ಗಾವಣೆಯಾಗಿರತಕ್ಕಂಥಾದ್ದು ಇರಬಹುದು. ಅದು ಏನಾದರೂ ಆ ರೀತಿ ಅಕಸ್ಮಾತ್ ಆಗಿರತಕ್ಕಂಥ ಪ್ರಕರಣಗಳು ಇದ್ದರೆ ಮತ್ತೆ ನಾವು ಅರಣ್ಯ ಇಲಾಖೆಯಿಂದ ವಾಪಸ್ಸು ಪಡೆಯುತಕ್ಕಂಥ ಪ್ರಸ್ತಾಪಕ್ಕೆ ಕೇಂದ್ರ ಸರ್ಕಾರದಿಂದ ರಿಲೀಜ್ ಆಗಿ

ಬರಬೇಕು. ಈ ಎಲ್ಲಾ ಪ್ರಕ್ರಿಯೆಗಳು ಇವೆ. ಇದು ಮುಖ್ಯವಾಗಿ ಗಮನ ಸೆಳೆಯುವಂಥ ನೋಟಿಸ್‌ನಲ್ಲಿ ಇದಕ್ಕೆ ಸೀಮಿತವಾಗಿರತಕ್ಕಂಥ ಪ್ರಶ್ನೆಯನ್ನು ಮಾನ್ಯ ಶ್ರೀರಾಮರೆಡ್ಡಿ, ಶಾಸಕರು ಕೇಳಿದ್ದಾರೆ. ತಮ್ಮಲ್ಲಿರುವಂತಹ ಮಾಹಿತಿಯನ್ನು ದಯವಿಟ್ಟು ನನಗೆ ಕಳುಹಿಸಿದರೆ ತಾವು ಕೊಟ್ಟಂತಹ ಮಾಹಿತಿಗೆ ಅನುಗುಣವಾಗಿ ನಾನು ಸಭೆಗೆ ಪ್ರತಿಕ್ರಿಯೆಯನ್ನು ತೋರಿಸುತ್ತೇನೆ. ಮತ್ತೆ ಈ ಸೇಂದಿ ಮರಗಳಿಗೆ ಸಂಬಂಧಪಟ್ಟ ವಿಚಾರ ಇದರಲ್ಲಿ ಮುಖ್ಯವಾಗಿ ಪ್ರಸ್ತಾಪಿಸಲ್ಪಟ್ಟ ಸನ್ಮಾನ್ಯ ಅಧ್ಯಕ್ಷರೇ, ಅದನ್ನು ನಾವು ಗಮನದಲ್ಲಿಟ್ಟುಕೊಳ್ಳುತ್ತೇನೆ. ಅವಧಿಯನ್ನು ವಿಸ್ತರಿಸಬೇಕಾಗಿದ್ದರೆ ಅದನ್ನೂ ಕೂಡ ನಾವು ವಿಸ್ತರಿಸುವುದರ ಬಗ್ಗೆ ಪರಿಗಣಿಸುತ್ತೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅರ್ಜಿ ಹಾಕಿಕೊಳ್ಳುವುದಕ್ಕೆ ಅವಧಿಯನ್ನು ಆರು ತಿಂಗಳಾದರೂ ವಿಸ್ತರಿಸಿದರೆ ಒಳ್ಳೆಯದು. ಮಾನ್ಯ ಸಚಿವರಾದ ಪ್ರಕಾಶ್‌ರವರು ಹೇಳಿರತಕ್ಕಂಥಾದ್ದರಲ್ಲಿ ಸತ್ಯಾಂಶ ಇದೆ. ದುರುಪಯೋಗ ಮಾಡಿಕೊಳ್ಳತಕ್ಕಂಥ ಅವಕಾಶಗಳೂ ಸಹ ಇದೆ. ಇಲ್ಲ ಎಂದು ಏನೂ ಇಲ್ಲ. ಆದರೆ ಯಾರೋ ಕೆಲವರು ದುರುಪಯೋಗ ಮಾಡಿಕೊಳ್ಳುತ್ತಾರೆ ಎಂದು ಹೇಳಿ ತಿಳುವಳಿಕೆ ಇಲ್ಲದೇ ಇರುವಂತಹ ಅಮಾಯಕರನ್ನು ನಾವು ಬಲಿ ಮಾಡುವುದಕ್ಕಾಗುವುದಿಲ್ಲ. ದಯವಿಟ್ಟು ನಾನು ಮತ್ತೊಮ್ಮೆ ಒತ್ತಾಯ ಮಾಡುತ್ತಿದ್ದೇನೆ. ಕನಿಷ್ಟ 6–7 ತಿಂಗಳಾದರೂ ಅವರಿಗೆ ಅವಕಾಶ ಕೊಟ್ಟು ವಿಸ್ತರಣೆ ಮಾಡಿದರೆ ಪ್ರಯೋಜನವಾಗುತ್ತದೆ. ದುರುಪಯೋಗ ಆಗದಂತೆ ತಡೆಯಲು ಕ್ರಮಗಳನ್ನು ಸಹ ತೆಗೆದುಕೊಂಡರೆ ಒಳ್ಳೆಯದು. ಯಾರೋ ದುರುಪಯೋಗ ಮಾಡಿಕೊಳ್ಳುತ್ತಾರೆಂದು ಮುಗ್ದರಿಗೆ ತೊಂದರೆ ಮಾಡುವುದು ಬೇಡ. ದಯವಿಟ್ಟು 6 ತಿಂಗಳಾದರೂ ವಿಸ್ತರಣೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೇ, ಇದಕ್ಕೆ ಸಂಬಂಧಪಟ್ಟ ಹಾಗೆ ನಮ್ಮಲ್ಲಿ ಈಗ ಡಿಸ್‌ಪೋಸ್ ಮಾಡಲಿಕ್ಕೆ ತಾವು ಅವಧಿಯನ್ನು ವಿಸ್ತರಣೆ ಮಾಡಿದ್ದೀರಿ. ಅರ್ಜಿಗಳನ್ನು ವಿಲೇವಾರಿ ಮಾಡಲಿಕ್ಕೆ ತಾವೇನು ಅವಧಿಯನ್ನು ಕೊಟ್ಟಿದ್ದೀರಿ ಅದು ಖಂಡಿತವಾಗಿ ಕಾರ್ಯಸಾಧುವಲ್ಲ. ಕಾರಣವೇನೆಂದರೆ ನಿಮ್ಮಲ್ಲಿ ಸರ್ವೇಯರ್‌ಗಳು ಇಲ್ಲ. ಸರ್ವೇ ಮಾಡುವುದಕ್ಕೆ ಆಗುತ್ತಿಲ್ಲ. ರೆವಿನ್ಯೂ ಸೆಕ್ರೆಟರಿಯಗಳು ಇಲ್ಲ. 2–3 ಸರ್ಕಲ್‌ಗೆ ಒಬ್ಬೊಬ್ಬ ಇದ್ದಾನೆ. ರೆವಿನ್ಯೂ ಇನ್ಸ್‌ಪೆಕ್ಟರ್‌ಗಳೂ ಇಲ್ಲ. ಹೀಗಾಗಿ ಸ್ಥಳಕ್ಕೆ ಹೋಗಿ ರೆಕಾರ್ಡ್ ಮಾಡುವಂಥಾದ್ದರಲ್ಲಿಯೇ ವಿಳಂಬವಾಗುತ್ತಿದೆ. ಹಾಗಾಗಿ ಇನ್ನು ಒಂದು ವರ್ಷ ಟೈಮ್ ಕೊಟ್ಟರೂ ಸಹ ಸಾಕಾಗುತ್ತಿಲ್ಲ. ನಾವು ಶಾಸಕರಾಗಿ ಕಳೆದ ಎರಡು ಅವಧಿಯಲ್ಲಿ ಕುಳಿತುಕೊಂಡು ಮಾಡಿದ್ದೇವೆ ಏನೂ ಮಾಡುವುದಕ್ಕೆ ಆಗುತ್ತಿಲ್ಲ. ದಯಮಾಡಿ ಇದನ್ನು ಇನ್ನಷ್ಟು ವಿಸ್ತರಣೆ ಮಾಡಬೇಕು ಇಲ್ಲದಿದ್ದರೆ ಸ್ಪೆಷಲ್ ಸರ್ವೇಯರ್‌ಗಳನ್ನು ಅದಕ್ಕೆ ಹಾಕಬೇಕು. ಇನ್ನೊಂದು 94ರವರೆಗೂ ಅರ್ಜಿಗಳನ್ನು ಹಾಕಲು ಅವಕಾಶ ಕೊಟ್ಟಿರುವುದು- ಫಾರಂ ನಂಬರ್ 50 ರಲ್ಲಿ ಹಾಕುವುದಕ್ಕೆ ಆಮೇಲೆ ಸರ್ಕಾರಿ ಜಾಗ ಮತ್ತು ಗೋಮಾಳಗಳಿಗೆ ಉಳಿದಂತಹ ರೆವಿನ್ಯೂ ಜಮೀನುಗಳಿಗೆ ಎಲ್ಲದ್ದಕ್ಕೂ ಕೊಡಬಹುದು ಎನ್ನುವ

ತಿದ್ದುಪಡಿ ತಂದ ನಂತರ ಫಾರಂ ನಂಬರ್ 53ರಲ್ಲಿ ಅರ್ಜಿ ಹಾಕುವುದಕ್ಕೆ ಅವಕಾಶ ಕೊಟ್ಟಿರಿ. ಅದು ಎರಡರ ಡಿಫರೆನ್ಸ್ ಗೊತ್ತಾಗದೇ ಫಾರಂ ನಂಬರ್ 50ರಲ್ಲಿ ನಾವು ಅರ್ಜಿ ಹಾಕಿದ್ದೇವೆಯಲ್ಲ ಎಂದು ಹೇಳಿ ಸುಮ್ಮನೆ ಕುಳಿತರು ಕೆಲವರು ಈಗ ಫಾರಂ 50ರಲ್ಲಿ ಗೋಮಾಳಗಳಲ್ಲಿ ನಾವು ಮಂಜೂರು ಮಾಡುವುದಕ್ಕೆ ಬರುವುದಿಲ್ಲ. ಅವರು ಫಾರಂ ನಂಬರ್ 53 ಅರ್ಜಿ ಹಾಕಿಕೊಳ್ಳಬೇಕು. ಇಂತಹ ಅಮಾಯಕ ರೈತರು ಹಳ್ಳಿಗಳಲ್ಲಿ ಸಾವಿರಾರು ಜನ ಇದ್ದಾರೆ. ದಯಮಾಡಿ ಈ ಬಗ್ಗೆ ಪರಿಶೀಲನೆ ಮಾಡಬೇಕು ಅಧಿಕಾರಿಗಳ ಜೊತೆಯಲ್ಲಿ ಇದನ್ನು ಮಾಡಿದರೆ ಆ ಅಮಾಯಕ ಜನರಿಗೆ ಅನುಕೂಲ ಮಾಡಿಕೊಂಡು ಸರ್ಕಾರ ಯಾವ ಸದುದ್ದೇಶದಿಂದ ಈ ಒಂದು ಕಾನೂನು ತಂದಿತ್ತು ಆ ಸದ್ದುದ್ದೇಶ ಅನುಷ್ಠಾನ ಆಗದಂತೆಯಾಗುತ್ತದೆ. ದಯಮಾಡಿ ಇದರ ಬಗ್ಗೆ ಅವಕಾಶ ಕೊಡಬೇಕು.

ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) : ಮಾನ್ಯ ಅಧ್ಯಕ್ಷರೇ, ಉಡುಪಿ ಜಿಲ್ಲೆಯಲ್ಲಿ ಅಕ್ರಮ ಸಕ್ರಮಗಳು ಆದಂತಹ ಫೈಲ್‌ಗಳ ವಿಲೇವಾರಿ ಏನಿದೆ, ಅದು ಆಗಿ ಹಣ ಕಟ್ಟಿದ್ದಾರೆ ಆದರೆ ಹಕ್ಕು ಪತ್ರ ಇದುವರೆಗೂ ಕೊಟ್ಟಿಲ್ಲ. ಕಾರಣ ಕೇಳಿದರೆ ಸುಪ್ರೀಂ ಕೋರ್ಟಿನ ಒಂದು ತೀರ್ಮಾನದಿಂದ ಕೆಲವು ಗೊಂದಲಗಳು ಇವೆ ಅರಣ್ಯ ಇಲಾಖೆ ಹಸ್ತಕ್ಷೇಪ ಇದೆ ಆದ್ದರಿಂದ ನೀವು ಹಣ ಕೊಟ್ಟಿದ್ದರೂ ಸಹ ನಾವು ಹಕ್ಕುಪತ್ರ ಕೊಡಲಿಕ್ಕೆ ಆಗುತ್ತಿಲ್ಲ. ಹೊಸ ಆದೇಶ ಬಂದರೆ ನಾನು ಕೊಡುತ್ತೇನೆಂದು ಅಲ್ಲಿನ ತಹಶೀಲ್ದಾರ್‌ರವರು ಹೇಳುತ್ತಿದ್ದಾರೆ. ಈ ಹಕ್ಕುಪತ್ರ ಕೊಡತಕ್ಕಂಥ ಕೆಲಸವನ್ನು ಯಾವಾಗ ಮಾಡುತ್ತೀರಿ ? ಈ ಗೊಂದಲ ವಾತಾವರಣ ಉಡುಪಿ ಜಿಲ್ಲೆಯಲ್ಲಿದೆ. ಇವತ್ತು ಸಿಟ್ಟಿಂಗ್ ಆಗದೇ 600 ಫೈಲ್‌ಗಳ್, ಅಂದರೆ ಹಣ ಕಟ್ಟಿರುವುದು ಬಾಕಿ ಇದೆ. ಅದನ್ನು ಯಾವಾಗ ಇತ್ಯರ್ಥ ಮಾಡುತ್ತೀರಿ?

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ.

ಶ್ರೀ ಪ್ರಭಾಕರ್ ಬರಿಗೇರಿ : ಮಾನ್ಯ ಅಧ್ಯಕ್ಷರೇ, ನಮ್ಮಲ್ಲಿ ಸಿ ಅಂಡ್ ಡಿ ಲ್ಯಾಂಡ್‌ನಲ್ಲೂ ಕೂಡ ಬಗರ್ ಹುಕ್ಕುಂ ಸಾಗುವಳಿ ಮಾಡಿ ಅರ್ಜಿಗಳನ್ನು ಹಾಕಿದ್ದಾರೆ. ಅದೂ ಕೂಡ ಬಾಕಿ ಇದೆ. ಅದರೊಟ್ಟಿಗೆ ಗೋಮಾಳದಲ್ಲೂ ಕೂಡ ಅಕ್ರಮ ಸಕ್ರಮದಲ್ಲಿ ಅರ್ಜಿಗಳು ಬಂದಿವೆ. ಅದನ್ನೂ ಕೂಡ ಸಕ್ರಮ ಮಾಡುವುದಕ್ಕೆ ಆಗುವುದಿಲ್ಲ ಎನ್ನುವ ಸುತ್ತೋಲೆ ಬಂದಿದೆ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಅದಕ್ಕೂ ಕೂಡ ನಾವು ಏನಾದರೂ ಮಾಡಿಕೊಂಡು ಮಾಡುವುದಕ್ಕೆ ಆಗುತ್ತದೆಯೇ? ಗೋಮಾಳದಲ್ಲಿ ಸಹ ಸಣ್ಣ ರೈತರು ಅತಿ ಸಣ್ಣ ರೈತರು ಅಕ್ರಮಣ ಮಾಡಿಕೊಂಡು ಕೃಷಿಯನ್ನು ಮಾಡಿದ್ದಾರೆ ಅವರಿಗೂ ಸಹ ಕೊಡಲಿಕ್ಕೆ ಬರುತ್ತದೆಯೇ?

ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು) : ಮಾನ್ಯ ಅಧ್ಯಕ್ಷರೇ, ಚಿಕ್ಕಮಗಳೂರು ಜಿಲ್ಲೆಯಲ್ಲಿ 2000ನೇ ಇಸವಿಯಲ್ಲಿ 1 ಲಕ್ಷ 28 ಸಾವಿರ ಎಕರೆ ಕಂದಾಯ ಇಲಾಖೆ ಜಮೀನನ್ನು ಅರಣ್ಯ ಇಲಾಖೆಗೆ ವರ್ಗಾವಣೆ ಮಾಡಿದರು. ಅಲ್ಲಿ ಮಾನ್ಯ ಗೋಪಾಲಕೃಷ್ಣಗೌಡರು ಜಿಲ್ಲಾಧಿಕಾರಿಗಳು ಆಗಿದ್ದರು. ಇದರಿಂದ ಸಾವಿರಾರು ನಿವಾಸಿಗಳಿಗೆ ತೊಂದರೆಯಾಗಿದೆ. ಈಗಾಗಲೇ ಅವರು ಜಮೀನು ಮಾಡಿಕೊಂಡು

ವಾಸ ಮಾಡುತ್ತಿದ್ದಾರೆ. ಅವರಿಗೆ ತೊಂದರೆಯಾಗಿದೆ. ಖಂಡಿತ ಈ ತರಹ ಆಗುವುದಕ್ಕೆ ಬಿಡಬಾರದು. ಈ ಸಮಸ್ಯೆಯನ್ನು ಬಗೆಹರಿಸಿಕೊಡಬೇಕೆಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಆರ್. ಧ್ರುವ ನಾರಾಯಣ (ಸಂತೇ ಮರಳ್ಳಿ) : ಸೇಡಂ ತಾಲ್ಲೂಕಿನಲ್ಲಿ ಈಗಾಗಲೇ ಸುಮಾರು 80 ಜನ ರೈತರಿಗೆ ಬಂಡ್‌ಂಪಲ್ಲಿ ತಾಂಡ ಎನ್ನುವಂತಹ ಒಂದು ಏರಿಯಾ ಇದೆ. ಈಗಾಗಲೇ ಅವರಿಗೆ ಜಮೀನು ಗ್ರ್ಯಾಂಟ್ ಆಗಿದೆ. ಅಲ್ಲಿನ ರೈತರು ಸುಮಾರು 15–20 ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದಾರೆ. ಅದು ಆಂಧ್ರಪ್ರದೇಶದ ಗಡಿ ಭಾಗದಲ್ಲಿ ಬರುವುದರಿಂದ ಆಂಧ್ರಪ್ರದೇಶದ ಫಾರೆಸ್ಟ್ ಆಫೀಸರ್ಸ್ ಬಂದು ಇದು ನಮ್ಮ ರಾಜ್ಯಕ್ಕೆ ಬರುತ್ತದೆ ಜಮೀನು ಅಂತ ಹೇಳಿ ರೈತರಿಗೆ ಕಿರುಕುಳ ಕೊಡುತ್ತಿದ್ದಾರೆ. ಅವರು ಪಾಪ ಬಹಳ ಬಡ ರೈತರು ಇದ್ದಾರೆ ಅವರು ಒಂದು ಎಕರೆ ಎರಡು ಎಕರೆಯಲ್ಲಿ ಜೀವನ ಸಾಗಿಸುತ್ತಿದ್ದಾರೆ. ಅದನ್ನು ಸರ್ವೆ ಮಾಡಬೇಕೆಂದು ಇದ್ದರೂ ಸಹ ಬಹಳಷ್ಟು ದಿನಗಳಿಂದ ಸರ್ವೆ ಮಾಡಲು ಆಗುತ್ತಿಲ್ಲ. ಅದು ನಮ್ಮ ಜಾಗ, ನಮ್ಮ ರೈತರೇ ಅಲ್ಲಿ ಬಹಳ ವರ್ಷಗಳಿಂದ ಸಾಗುವಳಿ ಮಾಡುತ್ತಿರುವುದರಿಂದ ಇದಕ್ಕೆ ಶೀಘ್ರದಲ್ಲಿಯೇ ಒಂದು ಪರಿಹಾರ ಹುಡುಕಬೇಕಾಗಿದೆ.

ಶ್ರೀ ಎಂ ಪಿ ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಜ್ಞಾನೇಂದ್ರರವರು ಪ್ರಸ್ತಾಪ ಮಾಡಿರತಕ್ಕಂಥಾದ್ದು ಬಹಳ ಮುಖ್ಯವಾದ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಈ ಚುನಾವಣೆ ಮೊದಲಾಗಿರತಕ್ಕಂಥಾದ್ದು ಕೂಡ ಅನುಸಂಗಿಕವಾಗಿ ಆಗಿರತಕ್ಕಂಥಾದ್ದು ಒಂದು ಕಡೆಗೆ ಮತ್ತು ಅಕ್ರಮ ಸಕ್ರಮಗಳನ್ನು ಮಾಡಬೇಕಾದಂತಹ ಸಂದರ್ಭದಲ್ಲಿ ನಿಗದಿತವಾದ ಸಮಯದಲ್ಲಿ ಸಮಿತಿಗಳು ಸೇರಬೇಕು. ಎಲ್ಲೆಲ್ಲಿ ಶಾಸಕರು ಅದಕ್ಕಾಗಿ ಅವಕಾಶವನ್ನು ಕಲ್ಪಿಸಿಕೊಂಡು ಕುಳಿತುಕೊಂಡಿರುತ್ತಾರೆ ಅಥವಾ ಆ ಸಮಿತಿಗಳು ಕಾಲಕ್ಕೆ ಸರಿಯಾಗಿ ಕುಳಿತುಕೊಳ್ಳುತ್ತವೆ ಅಲ್ಲಿ ವಿಲೇವಾರಿಗಳು ತ್ವರಿತಗತಿಯಲ್ಲಿ ಆಗಿವೆ. ಮತ್ತು ಎರಡನೆಯದು ಮುಖ್ಯವಾಗಿರತಕ್ಕಂಥ ಅಲ್ಲಿ ಸರ್ವೆಯರ್ ಇಲ್ಲದೇ ಇರುವಂತಹ ಕಾರಣ ಕೂಡ ಇದಕ್ಕೆ ಒಂದು ಕಾರಣ ಆಗಿರಬಹುದು ತಾವು ಹೇಳಿದಂತೆ ವಿಶೇಷ ಸರ್ವೇಯರ್‌ಗಳನ್ನು ನಾವು ಈಗ ಏನು ನೇಮಕಾತಿ ಮಾಡಿಕೊಂಡಿದ್ದೇವೆ, ಈ ಸರ್ಕಾರಿ ಜಮೀನುಗಳಿಗೆ ಸಂಬಂಧಪಟ್ಟಂತೆ ಅಳತೆ ಮಾಡಲಿಕ್ಕೆ ಅವರಿಗೆ ಅಧಿಕಾರ ಇರತಕ್ಕಂಥ ರೀತಿಯಲ್ಲಿ ತಾತ್ಕಾಲಿಕವಾಗಿ ನೇಮಕಾತಿಯನ್ನು ಮಾಡಿಕೊಂಡಿದ್ದೇವೆ. ಅದು ಅವರಿಗೆ ಈಗ ಆಜ್ಞೆಯನ್ನು ಕೊಟ್ಟಿಲ್ಲ ಎನ್ನುವ ಕಾರಣಕ್ಕಾಗಿ ವಿಳಂಬವಾಗಿದೆ ಇದು ಸರ್ಕಾರದ ಗಮನದಲ್ಲಿದೆ. ಇಷ್ಟರಲಿಯೇ ಸರ್ಕಾರ ಈ ಬಗ್ಗೆ ಒಂದು ನಿರ್ಣಯವನ್ನು ತೆಗೆದುಕೊಂಡು ಈಗಾಗಲೇ ತರಬೇತಿ ಪಡೆದಿರುವಂತಹ ತಾತ್ಕಾಲಿಕವಾಗಿ ಭರ್ತಿ ಮಾಡಿಕೊಂಡಿರತಕ್ಕಂಥ ಗುತ್ತಿಗೆ ಆಧಾರದ ಸರ್ವೇಯರ್‌ಗಳನ್ನು ಇಂತಹ ಎಲ್ಲಾ ಪ್ರಕರಣಗಳಲ್ಲಿ ಕೂಡ ಕೆಲಸ ಮಾಡಬೇಕು ಎಂದು ಹೇಳಿ ನಾವು ಆದೇಶವನ್ನು ಕೊಡುತ್ತೇವೆ. ಇದರ ಜೊತೆಗೆ ಏಪ್ರಿಲ್ ತಿಂಗಳು 2005ರ ಒಳಗಾಗಿ ಈ ಅರ್ಜಿಗಳು

ಎಲ್ಲಾ ವಿಲೇವಾರಿಯಾಗಬೇಕು ಎನ್ನುವುದು ಕಾರ್ಯಸಾಧುವಲ್ಲ ಎನ್ನುವಂತಹ ಮಾತನ್ನು ಈ ಕಾರಣಕ್ಕಾಗಿ ಅವರು ಹೇಳುತ್ತಿದ್ದಾರೆ ನಾವು ಈಗಾಗಲೇ ಈ ಗಡುವನ್ನು ವಿಸ್ತರಿಸುತ್ತೇವೆ ಎಂದ ತಕ್ಷಣವೇ ಅವರಲ್ಲಿ ಕಾಂಪ್ಲಸ್‌ನ್ಸ್ ಬರುತ್ತದೆ. ಮತ್ತೆ ಅಲಸ್ಯಗಳು ಆಗುವಂತಹ ಸಂಭವಗಳು ಇರುತ್ತವೆ. ಆ ಕಾರಣಕ್ಕಾಗಿಯೇ ಆ ಸಂದರ್ಭದಲ್ಲಿ ಇನ್ನೂ ವಿಲೇವಾರಿಯಾಗದೆ ಇರತಕ್ಕಂಥದ್ದು ಇದ್ದಾಗ ತಾವು ಸರ್ಕಾರದ ಗಮನವನ್ನು ಸೆಳೆಯಬಹುದು ಮತ್ತೆ ಅದರ ಅವಶ್ಯಕತೆಗೆ ಅನುಗುಣವಾದಂಥ ರೀತಿಯಲ್ಲಿ ಆ ಅವಧಿಯನ್ನು ವಿಸ್ತರಿಸಲಿಕ್ಕೆ ಸಾಧ್ಯವಾಗುತ್ತದೆ. ಈಗಾಗಲೇ ಮಾನ್ಯ ಶಾಸಕರೆಲ್ಲರೂ ಕೂಡ ಅರ್ಥ ಮಾಡಿ ಕೊಂಡಿದ್ದೀರಿ. ಒಂದು ಅವಕಾಶವನ್ನು ಕಲ್ಪಿಸಿಕೊಟ್ಟಿವು ಅಂದ ಕೂಡಲೇ ಒಂದು ಸದುದ್ದೇಶದ ನಡುವೆ ನೂರು ದುರುದ್ದೇಶದ ಜನರು ಸೇರಿಕೊಳ್ಳುತ್ತಾರೆ. ಈಗ ಹಿರಿಯ ಶಾಸಕರಾದ ಮಾನ್ಯ ಸೋಮಣ್ಣನವರು ಪ್ರಸ್ತಾಪ ಮಾಡಿದರು. ಮಾನ್ಯ ಅಶೋಕ್‌ರವರು ಹೇಳಿದಂತೆ ಅರಣ್ಯ ಇಲಾಖೆಗೆ ಗೋಮಾಳವನ್ನು ಕೊಟ್ಟಿರತಕ್ಕಂಥಾದ್ದು ಆಗಿದ್ದರೆ ಕೆಲವರು ಈಗಾಗಲೇ ನಾವು ಸಾಗುವಳಿ ಮಾಡುತ್ತಿದ್ದೇವೆಂದು ಹೇಳಿ ಅರ್ಜಿಗಳು ಬಂದು 26 ಎಕರೆ ಅವರ ಕ್ಷೇತ್ರದಲ್ಲಿ ಬರತಕ್ಕಂಥದ್ದು ಇದೆ ಎಂದು ಹೇಳಿ. ಇಲ್ಲಿ ಬೆಂಗಳೂರಿನ ಹತ್ತಿರ ಭೂಮಿ ಅಂದರೆ ಅದು ಚಿನ್ನದ ಗಣಿ ಅದಕ್ಕೆ ಜೋಹಾನ್ಸ್ ಬರ್ಗಗೆ ಹೋಗಬೇಕಾದುದು ಇಲ್ಲ. ಬೆಂಗಳೂರಿನ ಹತ್ತಿರವೇ ಇಲ್ಲಿ ಇದ್ದುಬಿಟ್ಟರೆ ಅವೆಲ್ಲಾ ಚಿನ್ನದ ಗಣಿಗಳಾಗಿರುತ್ತವೆ. ಆದ್ದರಿಂದ ಅನೇಕ ದಾಖಲಾತಿಗಳನ್ನು ಸೃಷ್ಟಿಮಾಡುತ್ತಾರೆ. ಫೋರ್ಜ್ ಮಾಡುತ್ತಾರೆ. ಅದರ ಮೂಲಕವಾಗಿ ಅನಾವಶ್ಯಕವಾಗಿರತಕ್ಕಂಥ ಗೂಂಡಾಗಳ ಪಡೆಯನ್ನು ಕಟ್ಟಿಕೊಂಡು ವ್ಯವಹಾರ ಮಾಡುತ್ತಾರೆ. ಇದರಡಿ ಅವಾಂಯುಕರಾಗಿರತಕ್ಕಂಥವರು ನ್ಯಾಯುವಾಗಿ ಇರತಕ್ಕಂಥವರು ಅಶಕ್ತರಾಗಿರತಕ್ಕಂಥವರು ಬಹಳ ಅನ್ಯಾಯಕ್ಕೆ ಒಳಗಾಗುತ್ತಾರೆ. ಆ ಕಾರಣಕ್ಕಾಗಿ ತಾವೇನು ಅವಧಿಯನ್ನು ವಿಸ್ತರಿಸಿ ಎಂದು ಹೇಳಿದಿರಿ 1999ರವರೆಗೂ ಅವಧಿಯನ್ನು ವಿಸ್ತರಿಸಿದ್ದೇವೆ. 1991ರ ನಂತರ 1999ರವರೆಗೂ ವಿಸ್ತರಿಸಿದ್ದೇವೆ. ಅದು ಅರ್ಜಿನಮೂನೆ 50ರಲ್ಲಿ ಕೊಡುವುದು ಮತ್ತು ಅರ್ಜಿ ನಮೂನೆ 53ರಲ್ಲಿ ಕೊಡತಕ್ಕಂಥಾದ್ದರಲ್ಲಿ ಅವರಿಗೆ ಸ್ವಲ್ಪ ಮಟ್ಟಿಗೆ ಗೊಂದಲ ಆಗಿರಬಹುದು. ಅದನ್ನೂ ಕೂಡ ಪರಿಶೀಲಿಸಿ ಮಾನ್ಯ ಎಲ್ಲಾ ಶಾಸಕರು ಹೇಳಿರತಕ್ಕಂಥ ವಿಷಯವನ್ನು ಗಮನದಲ್ಲಿರಿಸಿ ಸರ್ಕಾರ ಇದಕ್ಕೆ ಒಂದು ಸೂಕ್ತವಾದ ನಿರ್ಧಾರವನ್ನು ಕೈಗೊಳ್ಳುತ್ತದೆ.

ಶ್ರೀ ಕೆ. ಪ್ರಭಾಕರ ಬರಿಗೇರ : ಮಾನ್ಯ ಅಧ್ಯಕ್ಷರೇ ಸಿ ಅಂಡ್ ಡಿ ಲ್ಯಾಂಡ್.....

ಅಧ್ಯಕ್ಷರು ; ಮಾನ್ಯ ಸಚಿವರು ವಿವರವಾಗಿ ಉತ್ತರ ಕೊಟ್ಟಿದ್ದಾರೆ.

ಶ್ರೀ ವಿ ಸೋಮಣ್ಣ (ಬಿನ್ನಿಪೇಟೆ) : ಮಾನ್ಯ ಅಧ್ಯಕ್ಷರೇ, ಏನು ಮಾನ್ಯ ಹಿರಿಯ ಸಚಿವರು ಹೇಳಿದರು. ಇವತ್ತು ಬೆಂಗಳೂರು ನಗರದ ನಗರಪಾಲಿಕೆ ವ್ಯಾಪ್ತಿಯಲ್ಲಿ ಈಗಾಗಲೇ ಸರ್ಕಾರ ಮತ್ತು ರೆವಿನ್ಯೂ ಡಿಪಾರ್ಟ್‌ಮೆಂಟ್‌ನವರು ಸರ್ವೇ ಮಾಡಿ ಇದು ಸರ್ಕಾರದ್ದು, ಇದು ಫಾರೆಸ್ಟ್ ಇಲಾಖೆಗೆ ಸೇರಿದ್ದು ಆ

ಜಾಗ. ಇದರಲ್ಲಿ ಕಾಡನ್ನು ಬೆಳೆಸಿ, ಪ್ರಕೃತಿಯನ್ನು ಸ್ವಲ್ಪ ಸರಿಮಾಡಿ ಎಂದು ಅರಣ್ಯ ಇಲಾಖೆಯವರಿಗೆ ಕೊಟ್ಟು ಸುಮಾರು ಹತ್ತುಹನ್ನೆರಡು ವರ್ಷಗಳಾದರೂ ಕೂಡ, ಅಂತಹ ಜಮೀನಿನಲ್ಲೂ ಇವತ್ತು ಬೋಗಸ್ ರೆಕಾರ್ಡ್ ಮಾಡಿಕೊಂಡು ಕಬಳಿಸುವ ಯತ್ನಗಳು ನಡೆಯುತ್ತಿವೆ. ಎಂದು ಅಂದಿನ ಅರಣ್ಯ ಸಚಿವರಾದ ಶ್ರೀ. ಕೆ.ಹೆಚ್. ರಂಗನಾಥ್‌ರವರ ಗಮನಕ್ಕೆ ತಂದಾಗ ಎಂಟು ದಿವಸದಲ್ಲಿ ಇದನ್ನು ಬಗೆಹರಿಸುತ್ತೇವೆಂದು ಹೇಳಿ ಅಂದಿನ ಪ್ರಿನ್ಸಿಪಾಲ್ ಸೆಕ್ರೆಟರಿಯವರಿಗೆ ಕರೆದು ಹೇಳಿದರು. ನನ್ನ ಭಾವನೆಯಲ್ಲಿ ರಾಜ್ಯದಲ್ಲಿ ಬೇರೆ ಬೇರೆ ರೂಪದಲ್ಲಿರಬಹುದು. ಬೆಂಗಳೂರು ನಗರದ ನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಯಾರೂ ಹೊಲ ಉತ್ತು ಸಾಗುವಳಿ ಮಾಡುವ ಸಂದರ್ಭಗಳು ಇಲ್ಲ. ಇದು ಇಲ್ಲದಿರುವಾಗ ನನ್ನ ಕ್ಷೇತ್ರಕ್ಕೆ ಹಾಗೂ ನನ್ನ ಶಾಸಕ ಮಿತ್ರರಾದ ಮಾನ್ಯ ಅಶೋಕ್‌ರವರ ಕ್ಷೇತ್ರಕ್ಕೂ ಹೊಂದಿಕೊಂಡಿರುವ ಅವಲಹಳ್ಳಿಯ ಹೊಸಕೆರೆ ಹಳ್ಳಿ ಸರ್ವೆ ನಂ.ನಲ್ಲಿ 26 ಎಕರೆ ಜಮೀನನ್ನು ಅರಣ್ಯ ಭೂಮಿ ಎಂದು ಘೋಷಿಸಿ 15 ವರ್ಷಗಳಾಗಿವೆ, ಹತ್ತಾರು ಪತ್ರಗಳನ್ನು ಬರೆದಿದ್ದೇವೆ. ಇವತ್ತೂ ಕೂಡ ಅದು ನಮ್ಮ ಜಾಗವೆಂದು ಹೇಳಿದರೆ, ಕಂದಾಯ ಇಲಾಖೆಯವರು, ಇಲ್ಲ ಅರಣ್ಯ ಇಲಾಖೆಯಲ್ಲಿ ಅನಿರೀಕ್ಷಿತವಾಗಿರತಕ್ಕಂಥದ್ದು, ಇದು ಅವರದೇ ಎಂದು ಸರ್ಟಿಫೈ ಮಾಡತಕ್ಕಂಥ ಇಂತಹ ಅನೇಕ ಬೋಗಸ್ ಆಗತಕ್ಕಂಥ ವ್ಯವಸ್ಥೆಗಳಿರುವುದರಿಂದ ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಮನವಿ ಮಾಡುತ್ತೇನೆ, ತಾವು ಯಾವತ್ತೂ ಬೇಕಾದರೆ ಸ್ಥಳವೀಕ್ಷಣೆ ಮಾಡಬಹುದು. ಕೋಟ್ಯಾಂತರ ರೂಪಾಯಿಗಳ ಬೆಲೆ ಬಾಳತಕ್ಕಂಥ ಈ ಆಸ್ತಿಯನ್ನು ಸರ್ಕಾರದಲ್ಲಿ ಏನು ಡಿಕ್ಲೇರ್ ಆಗಿದೆ, ಅದನ್ನು ಉಳಿಸತಕ್ಕಂಥಾದ್ದು ಕೂಡ ಒಂದು ಪವಿತ್ರವಾದ ಕೆಲಸ, ದಯಮಾಡಿ ಸನ್ಮಾನ್ಯ ಸಚಿವರು ಅದರ ಬಗ್ಗೆ ಗಮನಹರಿಸಬೇಕೆಂದು ತಮ್ಮ ಮೂಲಕ ವಿನಂತಿ ಮಾಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಶಾಸಕ ಮಿತ್ರರು ಹೇಳಿದಂತೆ. ಇಲ್ಲಿ ಅವುಗಳನ್ನು ಉಳಿಸಲೇಬೇಕಾದಂಥ ಸಂದರ್ಭಗಳಿವೆ, ಬೆಂಗಳೂರು ಸುತ್ತಮುತ್ತಲಿನ 18 ಕಿಲೋಮೀಟರ್ ವ್ಯಾಪ್ತಿಯಲ್ಲಿ ಬರತಕ್ಕಂಥ ಅನೇಕ ಭೂಮಿಗಳನ್ನು, ಬೇರೆ ಬೇರೆ ರೀತಿಯಲ್ಲಿ ಕೊಟ್ಟಿರುವ ಜಾತಿ, ಬೇರೆ ಬೇರೆಯವರು ಕೊಟ್ಟಿರುವ ಅರ್ಜಿ ಕಬಳಿಸಿರುವುದು ಇದೆಲ್ಲವನ್ನೂ ನೋಡಿದರೆ ಪ್ರಾಯಶಃ ನಾಳೆ ಸರ್ಕಾರದವರು ಒಂದು ಶೌಚಾಲಯವನ್ನು ಸಹ ನಿರ್ಮಾಣ ಮಾಡುವುದಕ್ಕೆ ನಮಗೆ ಸ್ಥಳವಿಲ್ಲದ ಪರಿಸ್ಥಿತಿ ಉದ್ಭವವಾಗಬಹುದು. ನನಗೆ ಇದು ಒಂದು ಕೊಟ್ಟಂಥಹ ಅವಕಾಶ ಈ ತಲೆ ಮಾರಿನಲ್ಲಿರತಕ್ಕಂಥ ಅವಕಾಶ. ನಮಗೆ ಕಾನೂನಿನ ಅಡಿಯಲ್ಲಿ ಯಾರಿಗಾದರೂ ಕೂಡ ಮಂಜೂರಾತಿ ಮಾಡಿಕೊಡುತ್ತೇವೆಂದು ಇದ್ದಾಗ, ವಿವೇಚನರಹಿತರಾಗಿ ಮುಂದಿನ ತಲೆಮಾರಿಗೆ ಜವಾಬ್ದಾರಿಯುತರಾಗಬೇಕಾಗುತ್ತದೆ. ಇದು ನಮಗೆ ಬಂದಿರುವ ಬಳುವಳಿಯಲ್ಲ, ನಾವು ಮುಂದಿನ ತಲೆಮಾರಿಗೆ ತೀರಿಸಬೇಕಾದ ಋಣಕೂಡ ಈ ಪರಿಸರವನ್ನು ಮುಂದಿನ ತಲೆಮಾರಿಗೆ ತಲುಪಿಸಬೇಕಾದ ಋಣವಿರುತ್ತದೆ ಇವತ್ತು, ನಮಗೆ ಅಧಿಕಾರ ಇದೆ ಎಂದು

ಅವರೊಂದು ಅರ್ಜಿ ಕೊಡುತ್ತಾರೆ, ನಿಮ್ಮ ಅಧಿಕಾರವನ್ನು ಉಪಯೋಗಿಸಿ ಆ ವ್ಯಾಪ್ತಿಯಲ್ಲಿರುವವರಿಗೆ ಮಂಜೂರಾತಿ ಮಾಡಿ ಎಂದರೆ ನಾಳೆ ಐದು ಅಥವಾ ಹತ್ತು ವರ್ಷದೊಳಗಾಗಿ ಬೆಂಗಳೂರಿನಲ್ಲಿ ಒಂದು ಇಂಚು ಭೂಮಿ ಕೂಡ ಉಳಿಯುವುದಕ್ಕೆ ಸಾಧ್ಯವಾಗುವುದಿಲ್ಲ. ಅವೆಲ್ಲವೂ ಕೂಡ ನಮ್ಮ ಕನ್ನಡಿಗರನ್ನು, ಬಡವರನ್ನು, ಅಮಾಯಕರನ್ನು ಉಪಯೋಗಿಸಿಕೊಂಡು ದೊಡ್ಡವರು ಹಿಂದೆ ಇದ್ದಾರೆ. ಈ ದೊಡ್ಡವರ ಹಿಂದೆ ಇರುವ ಮುಖವಾಡವನ್ನು ತೆಗೆಯುವುದಕ್ಕೆ ಸಾಧ್ಯವಾಗುತ್ತಿಲ್ಲ, ಇದೊಂದು ಬಹಳ ವಿಷವರ್ತುಲದ ಪರಿಸ್ಥಿತಿ ಇದೆ, ತಾವು ಹೇಳಿದ ರೀತಿಯಲ್ಲಿ ಅದಕ್ಕೆ ಸಂಪೂರ್ಣವಾಗಿ ನಾವು ಬದ್ಧರಾಗಿರುತ್ತೇವೆ, ತಾವು ಹೇಳಿದ್ದನ್ನು ಇವತ್ತೇ ನಮ್ಮ ಅಧಿಕಾರಿಗಳ ಮುಖಾಂತರ ಕಡತವನ್ನು ತರಿಸಿಕೊಂಡು, ಯಾವ ಕಾಲಕ್ಕೂ ಅರಣ್ಯ ಬೆಳೆಸಿರುವುದನ್ನು ಬದಲಿ ಮಾಡುವುದಕ್ಕಾಗುವುದಿಲ್ಲ. ಇಲ್ಲಿರುವ ಮಾನ್ಯ ಸದಸ್ಯರುಗಳಾದ ಶ್ರೀ ಸೋಮಣ್ಣ ಹಾಗೂ ಇಲ್ಲಿರುವ ಶಾಸಕ ಮಿತ್ರರಿಗೆ ಗೊತ್ತಿರುವಂತೆ ಒಂದೊಂದು ಸಲ. ಎರಡೆರಡು ಸಲ ಗ್ರೀನ್ ಬೆಲ್ಟ್ ಅನ್ನು ಮುಂದಕ್ಕೆ ಸರಿಸುತ್ತಲೇ ಇದ್ದೇವೆ, ಹಾಗೆ ಇರುವುದಾದರೆ, ಬೆಂಗಳೂರಿಗೆ ಇದಕ್ಕಿಂತ ಇನ್ನು ಹೆಚ್ಚು ಬೆಂಗಳೂರು ಬೆಳೆದರೆ ಯಾವತ್ತಾದರೂ ಒಂದು ದಿವಸ ಕುಸಿದು ಬೀಳುತ್ತದೆ. ಅದಕ್ಕೆ ಅವಕಾಶ ಕಲ್ಪಿಸಲಾರದಂತೆ ಸರ್ಕಾರ ಯೋಚನೆಯನ್ನು ಮಾಡುತ್ತದೆ, ಶಾಸಕರು ಇದಕ್ಕೆ ಸಹಕಾರ ಕೊಡಬೇಕೆಂದು ಮನವಿ ಮಾಡುತ್ತೇನೆ,

ಹುಲಸೂರು ಮೀಸಲು ಕ್ಷೇತ್ರದಲ್ಲಿ ಕೈಗೊಂಡ ಯೋಜನೆಗಳು

71(620) ಶ್ರೀ ರಾಜೇಂದ್ರ ವರ್ಮ (ಹುಲಸೂರು) : ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕರ್ನಾಟಕ ಗಡಿ ಭಾಗದಲ್ಲಿರುವ ಹುಲಸೂರು ಮೀಸಲು ಕ್ಷೇತ್ರದ ಅಭಿವೃದ್ಧಿಗಾಗಿ ಕಳೆದ ಮೂರು ವರ್ಷಗಳಿಂದ ಯಾವ ಯಾವ ಯೋಜನೆಗಳಿಗೆ ಎಷ್ಟೆಷ್ಟು ಹಣ ಬಿಡುಗಡೆ ಮಾಡಲಾಗಿದೆ;

ಆ) ಹಣ ಸಾಲದೆ ಅಪೂರ್ಣಗೊಂಡಿರುವ ಯೋಜನೆಗಳನ್ನು ಪೂರ್ಣಗೊಳಿಸಲು ಹಣ ಬಿಡುಗಡೆ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು;

ಇ) 2004-05ನೇ ಸಾಲಿನ ಆಯವ್ಯಯದಲ್ಲಿ ಯಾವ ಯಾವ ಹೊಸ ಯೋಜನೆಗಳಿಗೆ ಎಷ್ಟೆಷ್ಟು ಹಣ ಬಿಡುಗಡೆ ಮಾಡಲಾಗುವುದು ;

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯ ಮಂತ್ರಿಗಳು)

ಅ) ಹುಲಸೂರು ಕ್ಷೇತ್ರಕ್ಕೆ ಯೋಜನಾ ಇಲಾಖೆಯ ವತಿಯಿಂದ ಬಿಡುಗಡೆ ಮಾಡಿದ ಹಣದ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಗಡೀ ಪ್ರದೇಶಾಭಿವೃದ್ಧಿ ಯೋಜನೆಯಲ್ಲಿ ಹಾಗೂ ಶಾಸಕರ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ ಅಪೂರ್ಣಗೊಂಡ ಯಾವ ಕಾಮಗಾರಿಗಳು ಇರುವುದಿಲ್ಲ. ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ ಇರುವ ಅಪೂರ್ಣಗೊಂಡ ಕಾಮಗಾರಿಗಳಿಗೆ, ಸಂಪನ್ಮೂಲಗಳನ್ನಾಧರಿಸಿ ಹಣ ಬಿಡುಗಡೆ ಮಾಡಲಾಗುವುದು.